# ಮರಳಿಬಂದ ಸೇನಾಪತಿ



23 ವರ್ಷಗಳ ಬಳಿಕ ಸೇನಾಪತಿ ಮತ್ತೆ ಬೆಳ್ಳಿತೆರೆಗೆ ದಾಳಿ ಇಡಲಿದ್ದಾನೆ. ಕಮಲಹಾಸನ್ ಅಭಿನಯದ ‘ಇಂಡಿಯನ್’ ಎನ್ನುವ ಸಿನಿಮಾ 1996ರಲ್ಲಿ ಬೆಳ್ಳಿತೆರೆಗೆ ಬಂದಾಗ ಉಂಟು ಮಾಡಿದ ಸಂಚಲನ ಈಗಲೂ ಚಿತ್ರಪ್ರೇಮಿಗಳ ಮನಸ್ಸಲ್ಲಿದೆ. ಅಲ್ಲಿ ರಾಜಕಾರಣಿಗಳ ಅನ್ಯಾಯದ ವಿರುದ್ಧ ಹಿಂಸಾತ್ಮಕ ಪ್ರತಿಭಟನೆ ನಡೆಸುವ ಸ್ವಾತಂತ್ರ್ಯಯೋಧ ನಾಯಕನ ಹೆಸರು ಸೇನಾಪತಿ. ಕಮಲಹಾಸನ್ ಮತ್ತು ನಿರ್ದೇಶಕ ಶಂಕರ್‌ಗೆ ದೇಶದಾದ್ಯಂತ ಖ್ಯಾತಿ ಒದಗಿಸಿತ್ತು ಈ ತ್ರಿಭಾಷಾ ಚಿತ್ರ. ಈಗ ಸೇನಾಪತಿ ಎರಡನೇ ಅವತಾರ ಎತ್ತಲಿದ್ದಾನೆ. ಶಂಕರ್ ಮತ್ತು ಕಮಲಹಾಸನ್ ಜೋಡಿಯ ‘ಇಂಡಿಯನ್ 2’ ಚಿತ್ರೀಕರಣ ಆರಂಭಿಸಿದೆ. ತಮಿಳು, ಹಿಂದಿ ಮತ್ತು ತೆಲುಗಿನಲ್ಲಿ ಹೊರಬರಲಿರುವ ಈ ಚಿತ್ರ ನಾಲ್ಕು ತಿಂಗಳ ಹಿಂದೆಯೇ ಆರಂಭವಾಗಬೇಕಿತ್ತು. ಆದರೆ ಶಂಕರ್ ಅವರ ಭಾರೀ ಬಜೆಟ್‌ಗೆ ನಿರ್ಮಾಪಕರು ಹಿಂಜರಿದಿದ್ದರಿಂದ ತಡವಾಗಿತ್ತು. ಈಗ ಬಜೆಟ್ ಮತ್ತು ತಾರಾಗಣವೂ ಫೈನಲ್ ಆಗಿದೆ. ಕಳೆದ ಒಂದು ವರ್ಷದಿಂದ ರಾಜಕೀಯದಲ್ಲಿ ಬ್ಯುಸಿ ಆಗಿದ್ದ ಕಮಲ್, ಮತ್ತೆ ಸಿನಿಮಾ ನಟನೆಯತ್ತ ಮನಸ್ಸು ಮಾಡಿರುವುದು ಅಭಿಮಾನಿಗಳ ಸಂಭ್ರಮ ಹೆಚ್ಚಿಸಿದೆ. ಈಗಾಗಲೆ ‘ತಲೈವನ್ ಇರುಕ್ಕಿಂಡ್ರನ್’ ಎನ್ನುವ ಇನ್ನೊಂದು ಹೊಸ ಸಿನಿಮಾಗೂ ಕಮಲ್ ಸಹಿ ಹಾಕಿದ್ದಾರೆ. ‘ಇಂಡಿಯನ್ 2’ ವರ್ಷದ ಕೊನೆಗೆ ತೆರೆ ಕಾಣಲಿದ್ದರೆ, ‘ತಲೈವನ್...’ ಮುಂದಿನ ವರ್ಷ ತೆರೆಗೆ ಬರಲಿದೆ.

ಕಮಲಹಾಸನ್ ಅಭಿನಯ ಕ್ಷೇತ್ರಕ್ಕೆ ಬಂದು 60 ವರ್ಷಗಳು ಉರುಳಿವೆ. ನವೆಂಬರ್ 7ರಂದು ಕಮಲ್ 65ನೇ ವರ್ಷಕ್ಕೆ ಕಾಲಿಡಲಿದ್ದಾರೆ. 4 ವರ್ಷ ವಯಸ್ಸಿನಲ್ಲೇ ಬೆಳ್ಳಿತೆರೆಗೆ ಕಾಲಿಟ್ಟ ಕಮಲ್, ಭಾರತೀಯ ಚಿತ್ರರಂಗದಲ್ಲಿ ಸುದೀರ್ಘ ಅಭಿನಯದ ಹೊಸ ದಾಖಲೆ ಬರೆಯುವಂತೆ ಕಾಣಿಸುತ್ತಿದೆ. ಈಗಲೂ ತರುಣರನ್ನು ನಾಚಿಸುವಂತೆ ಕ್ರಿಯಾಶೀಲರಾಗಿರುವ ಕಮಲ್, ರಾಜಕೀಯ ಪಕ್ಷವೊಂದನ್ನು ಸ್ಥಾಪಿಸಿರುವ ಹೊರತಾಗಿಯೂ ಚಿತ್ರರಸಿಕರ ಮಧ್ಯೆ ತನ್ನದೇ ಆದ ಸ್ಥಾನ ಉಳಿಸಿಕೊಂಡಿದ್ದಾರೆ. ಅವರ ರಾಜಕೀಯ ಚಟುವಟಿಕೆಗಳನ್ನು ಮೆಚ್ಚದವರೂ ಅವರ ಸಿನಿಮಾ ಎಂದರೆ ಮುಗಿಬೀಳುವುದು ತಪ್ಪಿಲ್ಲ. ಅಪ್ಪ ವಕೀಲ, ಅಮ್ಮ ಗೃಹಿಣಿ. ಕುಟುಂಬದ ಹಿತೈಷಿ ವೈದ್ಯರೊಬ್ಬರ ಒತ್ತಾಯದಿಂದ ‘ಕಳತ್ತೂರು ಕಣ್ಣಮ್ಮ’ ಎಂಬ ಚಿತ್ರದಲ್ಲಿ ನಟಿಸಿದ ಬಾಲನಟ ಕಮಲ್‌ಗೆ ರಾಷ್ಟ್ರಪತಿ ಪದಕವೂ ಸಿಕ್ಕಿತು. ಈ ಸಿನಿಮಾದ ಬೆನ್ನಲ್ಲೇ ಐದು ಹೊಸ ಸಿನಿಮಾಗಳಲ್ಲಿ ಅವಕಾಶ ದಕ್ಕಿತು. ಹೀಗೆ ಮೊದಲ ಇನಿಂಗ್ಸ್ ಅನ್ನು ಬಾಲ್ಯದಲ್ಲೇ ಮುಗಿಸಿದ ಕಮಲ್ ಬಳಿಕ ಶಾಲಾ ಓದಿನ ಸಲುವಾಗಿ ಚಿತ್ರರಂಗದಿಂದ ದೂರ ಸರಿದರು. ಏಳು ವರ್ಷಗಳ ಬಳಿಕ ಕಮಲ್ ಮತ್ತೆ ಚಿತ್ರರಂಗಕ್ಕೆ ಪ್ರವೇಶಿಸಿದ್ದು ನಟನಾಗಿ ಅಲ್ಲ, ನರ್ತಕನಾಗಿ! ಖ್ಯಾತ ನೃತ್ಯ ನಿರ್ದೇಶಕ ತಂಗಪ್ಪನ್ ಅವರ ಸಹಾಯಕನಾಗಿ ಕೆಲಸ ಮಾಡುತ್ತಲೇ ಸಣ್ಣಪುಟ್ಟ ಪಾತ್ರಗಳನ್ನು ನಿರ್ವಹಿಸಿದರು. ತಮಿಳಿನಲ್ಲಿ ಹಲವಾರು ನಟರನ್ನು ಸ್ಟಾರ್‌ಗಳನ್ನಾಗಿಸಿದ ನಿರ್ದೇಶಕ ಕೆ.ಬಾಲಚಂದರ್ ಅವರ ಕೈಗೆ ಸಿಕ್ಕ ಬಳಿಕ ನಟನಾಗಿ ಕಮಲ್ ಅದೃಷ್ಟ ಖುಲಾಯಿಸಿತು.

ನಟ, ನಿರ್ಮಾಪಕ, ನಿರ್ದೇಶಕ, ಚಿತ್ರಕಥೆಗಾರ, ಹಿನ್ನೆಲೆ ಗಾಯಕ, ಚಿತ್ರಸಾಹಿತಿ, ಟೀವಿ ನಿರೂಪಕ, ಕೊರಿಯೊಗ್ರಾಫರ್, ಡಾನ್ಸರ್, ರಾಜಕಾರಣಿ ಹೀಗೆ ಕಮಲ್ ಅವರದ್ದು ಬಹುರೂಪಿ ವ್ಯಕ್ತಿತ್ವ. ಅದರಲ್ಲೂ ಇತ್ತೀಚೆಗೆ ಅವರು ನಿಜಜೀವನದಲ್ಲಿ ನಿರ್ವಹಿಸುತ್ತಿರುವ ರಾಜಕಾರಣಿಯ ಪಾತ್ರ ಅವರನ್ನು ಹೆಚ್ಚು ಸುದ್ದಿಯಲ್ಲಿಟ್ಟಿದೆ. ಇತ್ತೀಚೆಗಷ್ಟೇ ಅವರು ನೀಡಿದ ಹೇಳಿಕೆಯೊಂದು ಮನೆಗೆ ಪೊಲೀಸ್ ಭದ್ರತೆ ಒದಗಿಸುವಂತೆ ಮಾಡಿತ್ತು. ‘ನಾಥೂರಾಮ್ ಗೋಡ್ಸೆ ಭಾರತದ ಮೊದಲ ಭಯೋತ್ಪಾದಕ, ಆತ ಹಿಂದೂ ಆಗಿದ್ದ’ ಎಂಬ ಕಮಲ್ ಹೇಳಿಕೆಗೆ ಬಲಪಂಥೀಯ ಪಕ್ಷದ ಕಾರ್ಯಕರ್ತರಿಂದ ತೀವ್ರ ಪ್ರತಿಭಟನೆ ವ್ಯಕ್ತವಾಗಿತ್ತು. ವೈಯಕ್ತಿಕ ಜೀವನದಲ್ಲಿ ನಾಸ್ತಿಕನಾಗಿರುವ ಕಮಲ್, ತನ್ನ ಎಡ ಪಂಥೀಯ ವಿಚಾರಧಾರೆಗಳಿಗೆ ಸಂಬಂಧಿಸಿ ಮುಲಾಜಿಲ್ಲದೆ ಮಾತನಾಡುತ್ತಾರೆ.

ಒಂದು ಕಾಲದಲ್ಲಿ ರಾಜಕೀಯ ಎಂದರೆ ಮೂಗು ಮುರಿಯುತ್ತಿದ್ದ ಕಮಲ್, ಸ್ವಂತ ರಾಜಕೀಯ ಪಕ್ಷ ‘ಮಕ್ಕಳ ನಿಧಿ ಮಯ್ಯಂ’ ಸ್ಥಾಪಿಸಿದ್ದೇ ಹಲವರಿಗೆ ಅಚ್ಚರಿ ಹುಟ್ಟಿಸಿದ ವಿದ್ಯಮಾನ. ಆದರೆ ಕಮಲ್‌ರ ಹೊಸ ಪಕ್ಷಕ್ಕೆ ಮತದಾರ ಅಷ್ಟೇನೂ ಉತ್ಸಾಹ ತೋರಿಸಲಿಲ್ಲ ಎನ್ನುವುದು ವಾಸ್ತವ. ಕಳೆದ ಲೋಕಸಭಾ ಚುನಾವಣೆಯಲ್ಲಿ ತಮಿಳ್ನಾಡಿದ 38 ಮತ್ತು ಪುದುಚೇರಿಯ ಒಂದು ಸ್ಥಾನಕ್ಕೆ ಕಮಲ್ ಪಕ್ಷದ ಅಭ್ಯರ್ಥಿಗಳು ಸ್ಪರ್ಧಿಸಿದ್ದರು. ಆದರೆ ಎಲ್ಲೂ ಗೆಲುವಿನ ಸಮೀಪಕ್ಕೂ ಬರಲಿಲ್ಲ. ದಕ್ಷಿಣ ಚೆನ್ನೈ, ಕೊಯಮತ್ತೂರು ಮತ್ತು ಮಧುರೈಗಳಲ್ಲಿ ಹೆಚ್ಚಿನ ಮತಗಳು ಸಿಕ್ಕಿದ್ದು ಬಿಟ್ಟರೆ ಇದೊಂದು ರಾಜ್ಯಮಟ್ಟದ ಪಕ್ಷ ಎಂದು ಗುರುತಿಸಿಕೊಳ್ಳಲು ಆಗಲೇ ಇಲ್ಲ. ಪಕ್ಷಕ್ಕೆ ಒಟ್ಟು ಸಿಕ್ಕಿದ ಮತಗಳ ಪ್ರಮಾಣ ಶೇಕಡಾ 4 ಅಷ್ಟೆ.

ಜನರ ಈ ನೆಗೆಟಿವ್ ರಾಜಕೀಯ ಧೋರಣೆಯಿಂದ ಕಮಲಹಾಸನ್ ನಿರಾಶೆ ಹೊಂದಿಲ್ಲ ಎನ್ನುವುದು ಕುತೂಹಲಕರ. ‘ನಮ್ಮ ಪಕ್ಷ ಆರಂಭವಾಗಿ ಒಂದು ವರ್ಷ. ಅಷ್ಟರಲ್ಲೇ ಬಂದ ಚುನಾವಣೆಯಲ್ಲಿ ಶೇಕಡಾ 4 ಮತ ಗಳಿಸಿದ್ದು ದೊಡ್ಡ ಸಾಧನೆಯೇ. ಪಕ್ಷದ ದೌರ್ಬಲ್ಯಗಳು ಏನು ಎನ್ನುವುದು ಚುನಾವಣೆಯಲ್ಲಿ ಗೊತ್ತಾಗಿದೆ’ ಎನ್ನುತ್ತಾರೆ ಕಮಲ್. 2021ರಲ್ಲಿ ತಮಿಳುನಾಡಿನಲ್ಲಿ ನಡೆಯಬೇಕಿರುವ ವಿಧಾನಸಭಾ ಚುನಾವಣೆಗೆ ಅವರೀಗ ಸಿದ್ಧತೆ ನಡೆಸಿದ್ದಾರೆ. ಅದಕ್ಕಾಗಿ ಚುನಾವಣಾ ತಜ್ಞ ಪ್ರಶಾಂತ್ ಕಿಶೋರ್ ಅವರ ಸಂಸ್ಥೆ ‘ಐಪ್ಯಾಕ್’ನ ನೆರವನ್ನೂ ಪಡೆಯುತ್ತಿದ್ದಾರೆ. ಚುನಾವಣೆಯ ಈ ಬಿಡುವಿನ ನಡುವೆ ಎರಡು ಚಿತ್ರಗಳನ್ನು ತೆರೆಗೆ ತರುವ ಅವರ ಆಲೋಚನೆಯಿಂದ ಚಿತ್ರರಸಿಕರಿಗಂತೂ ಖುಷಿಯಾಗಿದೆ.

■ ಹನಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65